ಇ) ಹರಿಜನರು 31,133

ಗಿರಿಜನರು 2.171

ಇತ್ತೀಚೆಗೆ ಕೇಂದ್ರ ಸರ್ಕಾರದಿಂದ ಶಿಕಾರಿಪುರ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆ ಮಂಜೂರು ಮಾಡಲಾಗಿದೆ.

ಶಿಕಾರಿಪುರದಲ್ಲಿ ಮಿನಿ ಸ್ಟೇಡಿಯಂ ನಿರ್ಮಾಣದ ಬಗ್ಗೆ

138 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ಪಟ್ಟಣದಲ್ಲಿನ ಮಾಧ್ಯಮಿಕ ಶಾಲಾ ಮೈದಾನವನ್ನು "ಮಿನಿ ಸ್ಟೇಡಿಯಂ" ಆಗಿ ಪರಿವರ್ತಿಸಲು ಸರ್ಕಾರ ಯೋಚಿಸಿದೆಯೇ.

ಆ) ಹಾಗಿದ್ದಲ್ಲಿ ಈ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೈಲಹೊಂಗಲ ನಗರದಲ್ಲಿ ಅಗ್ನಿಶಾಮಕದಳ ಸ್ಥಾಪಿಸುವ ಬಗ್ಗೆ.

401 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಅಗ್ನಿಶಾಮಕ ದಳದ ಘಟಕವನ್ನು ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಕೃಷಿ ಉತ್ಪನ್ನ ಸಹಕಾರ ಸಂಘದವರು ಈಗಾಗಲೇ ಅಗ್ನಿಶಾಮಕ ಘಟಕ ಸ್ಥಾಪಿಸುವ ಬಗ್ಗೆ ಜಾಗೆಯನ್ನು ಸರ್ಕಾರಕ್ಕೆ ಕೊಟ್ಟಿರುವರೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ) ಈ ಪ್ರಸ್ತಾಪನೆಯನ್ನು 1990-91ನೇ ಆರ್ಥಿಕ ಸಾಲಿನಲ್ಲಿ ಸರ್ಕಾರರ ಪರಿಶೀಲಿಸಲಾಗುತ್ತಿದೆ.

ಆ) ಇಲ್ಲ, ದಿನಾಂಕ 14-6-87 ರಂದು ನಡೆದ ಸಭೆಯಲ್ಲಿ, ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ಸಲುವಾಗಿ 4 ಎಕರೆ ಜಮೀನನ್ನು ಈ ಇಲಾಖೆಗೆ ಮಂಜೂರು ಮಾಡಲು ನಿಶ್ಚಯಿಸಿರುವುದಾಗಿ ಎ.ಪಿ.ಎಂ.ಸಿ. ಕಾರ್ಯದರ್ಶಿ ತಿಳಿಸಿದ್ದಾರೆ. ಆದರೆ, ಸದರಿ ಜಮೀನು ಇಲ್ಲಿಯವರೆಗೆ ಇಲಾಖೆಗೆ ವಹಿಸಿ ಕೊಟ್ಟಿರುವುದಿಲ್ಲ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮುರಗೋಡ, ದೊಡವಾಡ ಸ್ಟೇಡಿಯಂ ಕೆಲಸಗಳನ್ನು ಕುರಿತು

401 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಮುರಗೋಡ ಹಾಗೂ ದೊಡವಾಡ ಗ್ರಾಮಗಳಲ್ಲಿ ಕಟ್ಟುತ್ತಿರುವ ಸ್ಟೇಡಿಯಂಗಳು ಅರ್ಧಕ್ಕೆ ನಿಂತ ಸಂಗತಿ ಗಮನಕ್ಕೆ ಬಂದಿದೆಯೇ,